"ಕೋಪಿಸಿಕೊಳ್ಳಬೇಡ ಕಸ್ತೂರ್. ಇದು ನನಗೆ ಮುಖ್ಯವಾದ ಸಮಯ. ಈ ಸಮಯದಲ್ಲಿ ನೀನು ನನ್ನ ಜತೆಯಿರುವುದೇ ನನ್ನ ಭಾಗ್ಯ."

ಮನ ಕರಗಿದವಳಾಗಿ, "ಮೋಹನ್, ನೀವು ನನ್ನ ಕೊನೆಯ ಕಾಲದಲ್ಲಿ ನನ್ನ ಬಳಿ ತೋರಿಸಿದ ಪ್ರೀತಿಯೂ ಜವಾಬ್ದಾರಿಯೂ ನನ್ನನ್ನು ಇಲ್ಲಿಗೆ ಕರೆತಂದಿರಬೇಕು".

ನೋವನ್ನು ಕುರಿತ ಚಿಂತೆಯನ್ನು ಒಪ್ಪಿಕೊಂಡಾಗ ನೋವು ಇಲ್ಲವಾಯಿತು. "ಕಸ್ತೂರ್, ಕಸ್ತೂರ್ ನಮ್ಮ ನಡುವೆ ಜಗಳ ಬೇಡ. ನೀನು ಹೇಳಲು ಬಂದಿದ್ದನ್ನು ಹೇಳು. ನೋವಿನ ಜತೆ ಹೋರಾಡುತ್ತಲೇ ನಾನು ಹೋದರೆ, ಇನ್ನು ನಾವು ಮಾತನಾಡಲು ಸಾಧ್ಯವಾಗದೆ ಹೋಗಬಹುದು."

"ಮೋಹನ್, ನಿಮ್ಮ ಬದುಕೇ ಒಂದು ಅನ್ವೇಷಣೆ, ಹೋರಾಟ. ನಿಮ್ಮ ಸಂತೋಷ ಆ ಅನ್ವೇಷಣೆಯಿಂದ ದೊರಕುವ ಗೆಲುವು ಮಾತ್ರವೇ. ಇದರ ನಡುವೆ ನಿಮ್ಮ ಜೀವನದ ಪಾಲುದಾರಳಾಗಿ ನಾನು ಬಂದೆ. ಬದುಕಿನ ಸಂಭ್ರಮಗಳು ಮಾನವತ್ವಕ್ಕೆ ವಿರೋಧ ಎಂದು ಅಂದುಕೊಂಡಿರಿ. ನಮ್ಮನ್ನೂ ಹಾಗೆಯೇ ಆಲೋಚಿಸುವಂತೆ ಮಾಡಿದಿರಿ. ಅಕಸ್ಮಾತ್, ನಿಮ್ಮ ಜೀವನದಲ್ಲಿ ಸ್ವಾತಂತ್ರ್ಯ ಹೋರಾಟದ ಅಗತ್ಯವಿಲ್ಲದಿದ್ದರೆ, ನೀವು ಅದರಂತೆಯೇ ಇರುವ ಮತ್ತೊಂದನ್ನು ಆಯ್ಕೆ ಮಾಡಿಕೊಂಡಿರುತ್ತಿದ್ದೀರಿ. ಒಳ್ಳೆಯ ಆಹಾರ, ಸಂಗೀತ, ಪ್ರೇಮ, ಕಾಮ ಇವೆಲ್ಲವೂ ಮೂಲಭೂತ ಆಸೆಗಳು. ಅವು ಬದುಕನ್ನು ಸ್ವಾರಸ್ಯಕರವಾಗಿಸುತ್ತವೆ. ಇವೆಲ್ಲ ನಿಮಗೆ ಅರ್ಥವಾಗುವುದಿಲ್ಲ."

"ಕಸ್ತೂರ್, ದಯಮಾಡಿ ಕೋಪಿಸಿಕೊಳ್ಳದೆ ಮಾತನಾಡು. ಅದನ್ನು ಸಹಿಸಿಕೊಳ್ಳುವ ಮನಃಸ್ಥಿತಿ ನನಗೆ ಈಗಿಲ್ಲ. ಮನೆಯ ಕೆಲಸಗಳು, ಆಶ್ರಮದ ಕಾರ್ಯಗಳು, ರೋಗಿಗಳನ್ನು ಆರೈಕೆ ಮಾಡುವುದು. ಸ್ವಯಂಸೇವಕರನ್ನು ಭೇಟಿಯಾಗುವುದು ಎಂದು ನೀನು ನಿನ್ನ ಹೊರೆಗಳನ್ನು ಹೆಚ್ಚಿಸುತ್ತಲೇ ಹೋದೆ..."

"ಹೌದು, ನಿಮ್ಮ ಪ್ರೀತಿಯನ್ನೂ ಸಮಯವನ್ನೂ ನಾನೊಬ್ಬಳೇ ಹಂಚಿಕೊಳ್ಳಬೇಕೆಂದು ನಾನು ಎಂದೂ ಆಸೆಪಡಲಿಲ್ಲ. ಉಪ್ಪಿನ ಸತ್ಯಾಗ್ರಹದಲ್ಲಿ ನೀವು ಕೈದಾದ ಮೇಲೆ..."

"ಗೊತ್ತು. ನೀನು ಹೇಳಬೇಕಿಲ್ಲ. ಪೊಲೀಸರಿಂದ ದಾಳಿಗೆ ಒಳಗಾದ ಸ್ವಯಂಸೇವಕರ ಗ್ರಾಮಗಳಿಗೆ ನಡೆದುಕೊಂಡು, ಎತ್ತಿನ ಬಂಡಿಯಲ್ಲಿ ಹೋಗಿ ಅವರಿಗೆ ಧೈರ್ಯ ಹೇಳಿ ಹುರಿದುಂಬಿಸುವುದು, ಸಾಬರ್ಮತಿ ಆಶ್ರಮಕ್ಕೆ ಬರುವವರನ್ನು ಬಿಡುವಿಲ್ಲದೆ ಭೇಟಿಯಾಗುವುದನ್ನು ಮಾಡುತ್ತಿದ್ದೆ. ಮಣಿಲಾಲ್ ಮತ್ತು ರಾಮದಾಸನನ್ನು ಸಾಬರ್ಮತಿ ಜೈಲಿನಲ್ಲಿ ಭೇಟಿಯಾದಾಗ ಸಹ ನೀನು ನೊಂದುಕೊಳ್ಳಲಿಲ್ಲ. ಇಷ್ಟಕ್ಕೂ ಅವರನ್ನು ಕಾವಲುಗಾರರು ಕಟುವಾಗಿ ನಡೆಸಿಕೊಂಡಿದ್ದನ್ನು ಅವರ ಮುಖಗಳು ತೋರಿಸಿಕೊಟ್ಟಿರಬಹುದು. ಇದನ್ನೇ ಅಲ್ಲವೇ ನೀನು ಹೇಳಬೇಕೆಂದುಕೊಂಡಿರುವುದು. ಇದನ್ನು ನಾನು ಬಹಳ ಸಲ ಕೇಳಿರುವೆನಲ್ಲ. ನಿನ್ನ ಮನಸ್ಸಿನಲ್ಲಿ ಅವರು ಅನುಭವಿಸಿದ ನೋವು ಭದ್ರವಾಗಿ ಅಂಟಿಕೊಂಡಿದೆ. ಆದ್ದರಿಂದ ಅದು ತ್ಯಾಗವಾಗಿ ಕಾಣಿಸುತ್ತೆ."

ಇಬ್ಬರ ನಡುವೆ ಹೊರೆಯಾಗಿ ಬಿದ್ದಿರುವ ಮೌನವನ್ನು ಕಸ್ತೂರ್ ಕೆಡವಲು ಪ್ರಯತ್ನಿಸಿದಳು.

"ಮೋಹನ್, ನಿಮ್ಮ ದೇಹದಿಂದ ಸ್ರವಿಸುವ ರಕ್ತದ ವಾಸನೆಗೆ ನೊಣಗಳು ಮುತ್ತುತ್ತಿವೆ. ನೋಡಿ, ನನ್ನ ಕೈ ತವಕಿಸುತ್ತಿದೆ. ನಾನು ಹತ್ತಿರ ಇದ್ದರೆ, ಬೀಸಣಿಗೆಯಿಂದ ಬೀಸುತ್ತಿದ್ದೆ. ಈಗ ನೀವು ಎದ್ದೇಳುವುದು ಒಳ್ಳೆಯದು."

"ನಿನ್ನ ಸ್ವಚ್ಛತೆಯ ಬುದ್ಧಿ ಇನ್ನೂ ಹೋಗಲಿಲ್ಲವೇ?" ನೋವಿನಿಂದ ನಗಲು ಪ್ರಯತ್ನಿಸಿದಾಗ, ಅದು ಸಾಧ್ಯವಾಗದೆ ಹೋದದ್ದು ಅರ್ಥವಾಯಿತು.

"ನೀವು, ನಿಮ್ಮ ಕೈಯಿಂದ ಗುಂಡುಗಳನ್ನು ಹೊರಗೆ ತೆಗೆದು ಹಾಕಿ. ರಕ್ತ ಸೋರುವ ಜಾಗದಲ್ಲಿ ಕೈಯನ್ನು ಅದುಮಿ ಹಿಡಿದುಕೊಳ್ಳಿ. ಅಷ್ಟು ಸಾಕು, ಎದ್ದು ಬಿಡಬಹುದು."